2. ಸರ್ಕಾರದ ಆದೇಶ ಸಂಖ್ಯೆ : ಆಕುಕ 684 ಹೆಚ್‌ಎಸ್‌ಹೆಚ್ 2000 ದಿನಾಂಕ : 27.10.2000 ರನ್ವಯ ತಜ್ಞತೆ ಹೊಂದಿರು ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

3. ಸರ್ಕಾರದ ಆದೇಶ ಸಂಖ್ಯೆ : ಆಕುಕ 282 ಹೆಚ್‌ಎಸ್‌ಹೆಚ್ 01 ದಿನಾಂಕ : 29.5.2001ರ ಪ್ರಕಾರ ಖಾಸಗಿ ವಲಯ ತಜ್ಞ ವೈದ್ಯರನ್ನು ಸಮಾಲೋಚಕರನ್ನಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

4. ಸರ್ಕಾರದ ಆದೇಶ ಸಂಖ್ಯೆ : ಆಕುಕ 185 ಹೆಚ್‌ಎಸ್‌ಹೆಚ್ 2002 ದಿನಾಂಕ : 20.4.2002 ರನ್ವಯ ಖಾಸಗಿ ತಜ್ಞ ವೈದ್ಯರನ್ನು ಗೌರವಾರ್ಥ ತಜ್ಞ ವೈದ್ಯರಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

5. ಸರ್ಕಾರಿ ಆದೇಶ ಸಂಖ್ಯೆ : ಆಕುಕ 183 ಹೆಚ್‌ಎಸ್‌ಹೆಚ್ 02 ದಿನಾಂಕ : 6.5.2002 ರಲ್ಲಿ ನಿವೃತ್ತ ತಜ್ಞ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಉನ್ನತ ಶಿಕ್ಷಣ ವಿದ್ಯಾಲಯಗಳ ಅನುದಾನ ಕಡಿತ

302 (120) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) - ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಉನ್ನತ ಶಿಕ್ಷಣ ವಿದ್ಯಾಲಯಗಳ ಅನುದಾನ ಕಡಿತಗೊಳಿಸಲು ಸರ್ಕಾರ ಪರಿಶೀಲನೆ ನಡೆಸಿರುವುದು ನಿಜವೇ ;

ಆ) ಅನುದಾನ ಕಡಿತಗೊಳಿಸಿದರೆ ಹರಿಜನ, ಗಿರಿಜನ ಹಿಂದುಳಿದ ಹಾಗೂ ಬಡ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುವುದಿಲ್ಲವೇ ;

ಇ) ಅನುದಾನ ಕಡಿತದಿಂದ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಅನ್ಯಾಯವಾಗುವುದು ನಿಜವೇ?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಪ್ರಸ್ತುತ ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಮುಂಡರಗಿ ತಾಲ್ಲೂಕಿನಲ್ಲಿರುವ ಜಿಲ್ಲಾ ಪಂಚಾಯತ್ ರಸ್ತೆ ಕಾಮಗಾರಿಗಳ ಪರಿಶೀಲನೆ

303 (268) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) - ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನ ಬೆಣ್ಣೇಹಳ್ಳಿ-ಬೀಡನಾಳ ರಸ್ತೆ, ಶಿಂಗಟಾಲೂರ ಮುಂದಿನ ರಸ್ತೆ ಹಾಗೂ ಶಿಂಗಟಾಲೂರ ಸ್ಮಶಾನಕ್ಕೆ ಹೋಗುವ ರಸ್ತೆಗಳ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದ್ದು, ಈ ಕಾಮಗಾರಿಗಳನ್ನು ಗುಣ ನಿಯಂತ್ರಣ ವಿಭಾಗದಿಂದ ಪರಿಶೀಲನೆ ಮಾಡಲಾಗಿದೆಯೇ;

ಆ) ಇಲ್ಲದಿದ್ದಲ್ಲಿ, ಈಗಾಗಲೇ ನೀಡಿರುವ ಆಶ್ವಾಸನೆಯಂತೆ ಯಾವಾಗ ಪರಿಶೀಲನೆ ಮಾಡಲಾಗುವುದು ;

ಇ) ರಸ್ತೆಗಳ ಕಾಮಗಾರಿಯನ್ನು ಗುಣ ನಿಯಂತ್ರಣ ವಿಭಾಗ ಪರಿಶೀಲನೆ ಮಾಡಲು ವಿಳಂಬವಾಗಲು ಕಾರಣಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಗುಣ ನಿಯಂತ್ರಣ ವಿಭಾಗದವರು ಕಾಮಗಾರಿಗಳ ಗುಣವನ್ನು ದಿನಾಂಕ 11.12.2002 ರಂದು ಪರಿಶೀಲನೆ ಮಾಡಿರುತ್ತಾರೆ.

ಆ) ಉದ್ಭವಿಸುವುದಿಲ್ಲ

ಇ) ವಿಳಂಭವಾಗಿರುವುದಿಲ್ಲ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು

304 (84) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಪ್ರಸ್ತುತ ಖಾಲಿ ಇರುವ ಶಿಕ್ಷಕರ ಹುದ್ದೆಗಳು ಎಷ್ಟು ; ಅವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ;

ಆ) ಪ್ರತಿಯೊಂದು ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ತರಗತಿ ಕೊಠಡಿಗಳನ್ನು ನಿರ್ಮಿಸುವ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; ವಿವರಗಳನ್ನು ನೀಡುವುದು ?

ಶ್ರೀ ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಪ್ರಾಥಮಿಕ ಶಿಕ್ಷಕರ ಹುದ್ದೆಗಳು 158, ಪ್ರೌಢ ಶಾಲಾ ಶಿಕ್ಷಣದ ಹುದ್ದೆಗಳು 54. ಈಗಾಗಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು ಶೀಘ್ರದಲ್ಲಿಯೇ ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ತುಂಬಲಾಗುವುದು.

ಆ) ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಿಗೊಂದು ಕೊಠಡಿಯನ್ನು ಒದಗಿಸುವ ಉದ್ದೇಶದಿಂದ ವಿವಿಧ ಯೋಜನೆಗಳಡಿಯಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1993-1994ನೇ ಸಾಲಿನಿಂದಲೂ ರಾಜ್ಯ ವಲಯ ಮುಂದುವರೆದ ಯೋಜನೆಯಡಿಯಲ್ಲಿ, 1995-1996 ರಿಂದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಹಾಗೂ ನಗರ / ಪಟ್ಟಣ, ಪ್ರದೇಶಗಳಲ್ಲಿ ವಿಶೇಷ ಯೋಜನೆಯಡಿಯಲ್ಲಿಯೂ ಹಾಗೂ 2000-2001ನೇ ಸಾಲಿನಿಂದ ಪ್ರಧಾನ ಮಂತ್ರಿಯ ಗ್ರಾಮೋದಯ ಯೋಜನೆಯಡಿಯಲ್ಲಿಯು ಉಳಿದಂತೆ 2001-2002ನೇ ಸಾಲಿನಿಂದ ಸರ್ವ ಶಿಕ್ಷ ಅಭಿಯಾನ ಹಾಗೂ ಹನ್ನೊಂದನೆಯ ಹಣಕಾಸು ಆಯೋಗದಡಿಯಲ್ಲಿ ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಇದಲ್ಲದೆ ನಬಾರ್ಡ್‌ನ ಆರ್ಥಿಕ ನೆರವಿನೊಂದಿಗೆ ಆರ್.ಐ.ಡಿ.ಎಫ್.ನ ಅಡಿಯಲ್ಲಿ 4020 ಪ್ರಾಥಮಿಕ ಶಾಲೆಗಳಲ್ಲಿ 5286 ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಪ್ರಥಮ ಕಂತಾಗಿ 2002-2003ನೇ ಸಾಲಿನಲ್ಲಿ 1281